ಚಿತ್ತ ಕೆತ್ತಿದ ಚಿತ್ರ

# ಗೋಪಾಲಯ್ಯನವರ ಜೊತೆ ಐವತ್ತು ವರ್ಷ

## 'ನಿಗೂಢ ಮನುಷ್ಯರು' ಜಗತ್ತಿನ ಗೋಪಾಲಯ್ಯನಿಗೊಂದು ಪತ್ರ.



**ಚಿಂತಾಮಣಿ ಕೊಡ್ಲೆಕೆರೆ**

ಕಲೆ: ಅದೀಬ್ ಅಖ್ತರ್

ಪೂರ್ಣಚಂದ್ರ ತೇಜಸ್ವಿ ಅವರ 'ನಿಗೂಢ ಮನುಷ್ಯರು' ಪ್ರಕಟವಾದಾಗ ನಾನಿನ್ನೂ ಪ್ರೌಢಶಾಲಾ ವಿದ್ಯಾರ್ಥಿ. ಅದೊಂದು ಮಾಸಪತ್ರಿಕೆಯಲ್ಲಿ ಪ್ರಕಟವಾಗಿತ್ತೆಂದು ನೆನಪು. ಭೂದೃಶ್ಯಗಳ ದೃಷ್ಟಿಯಿಂದ ನನಗೆ ಪರಿಚಿತವೂ ಆಪ್ತವೂ ಆದ ಮಲೆನಾಡಿನ ಪರಿಸರದಲ್ಲಿ ನಡೆಯುವ ಕಥೆ ಅದು. ನಾವು ಕಣ್ಣಾರೆ ಕಾಣುತ್ತಿದ್ದ ಕಾಡಿನ ರಹಸ್ಯಮಯ ಲೋಕವನ್ನು ತೇಜಸ್ವಿಯವರು ಇನ್ನಷ್ಟು ತಲ್ಲಣ ಹುಟ್ಟಿಸುವ ಕಥೆಗಳನ್ನು ಹೇಳುವ ಮೂಲಕ ಮತ್ತೂ ನಿಗೂಢಗೊಳಿಸಿದರು. ಈ ಕಿರುಕಾದಂಬರಿಯನ್ನು ಓದಿದ ಎಷ್ಟೋ ದಿನಗಳವರೆಗೂ ಇಲ್ಲೇ ಎಲ್ಲೋ ನಮ್ಮ ಸುತ್ತಲೂ ಗೋಪಾಲಯ್ಯ, ಜಗನ್ನಾಥ, ರಂಗಪ್ಪ ಓಡಾಡಿಕೊಂಡಿದ್ದಾರೆ ಎನಿಸುತ್ತಿತ್ತು. ನಮ್ಮಂಥವರ ಕಣ್ಣಿಗೆ ಸ್ವತಃ ತೇಜಸ್ವಿ ಒಬ್ಬ ನಿಗೂಢ ಮನುಷ್ಯರಾಗಿ ಕಾಣುತ್ತಿದ್ದರು. ಸಾಹಿತ್ಯಾಸಕ್ತರಾದ ನಮ್ಮ ಹಿರಿಯರು ತೇಜಸ್ವಿಯವರ ಕುರಿತು ಓದಿ, ಕೇಳಿ ಬಲ್ಲವರಾಗಿದ್ದರು. ಮೈಸೂರು ಬಿಟ್ಟು ಕಾಡೊಳಗಿನ ಹಳ್ಳಿಯೊಂದರಲ್ಲಿ ಬದುಕು ಮಾಡಲು ನೆಲೆಗೊಂಡ ಅವರ ವ್ಯಕ್ತಿತ್ವದ ಬಗೆಗೆ ಅಪಾರ ಮೆಚ್ಚುಗೆಯಿಂದ ಹಿರಿಯರು ಮಾತಾಡುತ್ತಿದ್ದರು. ತೇಜಸ್ವಿಯವರು ಪತ್ರಿಕೆಗಳಲ್ಲಿ ಬರೆಯುತ್ತಿದ್ದ ಚಿತ್ರಲೇಖನಗಳು ನಾವು ಕಾಣುತ್ತಿದ್ದ ಹಕ್ಕಿಗಳನ್ನು ಬೇರೆಯದೇ ಬಣ್ಣ–ಬಗೆಗಳಲ್ಲಿ ತೋರುತ್ತಿದ್ದವು. ಪುಸ್ತಕವಾಗಿ ಈ ಕೃತಿ ಪ್ರಕಟವಾದುದು 1976ರಲ್ಲಿ; ಇನ್ನು ನಾಲ್ಕು ವರ್ಷಗಳಲ್ಲಿ ಅದಕ್ಕೆ ಐವತ್ತು ವರ್ಷ ತುಂಬುತ್ತದೆ. ನಾನು ಹಳ್ಳಿಯಿಂದ ಹೊರಟು, ಎಲ್ಲೆಲ್ಲಿ ಹೋಗಿ ಬಂದರೂ, ಈಗಲೂ ಬೆಂಗಳೂರಿನಲ್ಲಿಯೂ ಗೋಪಾಲಯ್ಯ ನೆನೆದಾಗಲೆಲ್ಲ ಸಿಗುತ್ತಾರೆ, 'ನೆಲಮನೆ ಪ್ರಕಾಶನ' ಅತ್ಯಂತ ಕಡಿಮೆ ಬೆಲೆಯಲ್ಲಿ ಸಾದಾ ಕಾಗದದಲ್ಲಿ ಅಚ್ಚು ಹಾಕಿದ ಆ ಕಾಲದ ಪ್ರತಿ ಅದು. ಮಕ್ಕಳಿಗೂ ಒತ್ತಾಯಿಸಿ ಓದಿಸಿದ್ದೇನೆ.

### ಪ್ರಿಯ ಗೋಪಾಲಯ್ಯ,

ತೇಜಸ್ವಿಯವರು ಹೇಳಿದ ಕಥೆಯ ಕಡೆಯ ಪುಟಗಳಲ್ಲಿ ನೀವು ಪಂಚೆ ಕಟ್ಟಿ ಮಡಿಸಿ ಹಾರೆ ಹಿಡಿದು ದೂಜ ಪರ್ಬುಗಳಿಗೆ ಜೊತೆಯಾಗಿ ನಿಂತು ಮಣ್ಣಿನ ದಿಬ್ಬದಿಂದ ಕೆಸರು ಎಳೆಯತೊಡಗಿದಿರಿ. ತಲೆಯೆತ್ತಿ ನೋಡಿದರೆ ಉಗ್ರಗಿರಿ ಶಿಖರ ಎರಗಿ ಬೀಳುವಂತಿದೆ. ಪರ್ಬುಗಳು ಭ್ರಮಿತ ಸ್ಥಿತಿಯಲ್ಲಿದ್ದರು. ಮನೆಯ ಮೇಲೆ ಗುಡ್ಡ ಜರಿದು ಅವರ ಒಬ್ಬನೇ ಮಗ ಮಣ್ಣಿನ ಅಡಿಯಾಗಿ ಹೋಗಿದ್ದ. ಪರ್ಬುಗಳು ಒಂದೇ ಸಮ ಕೆಸರು ತೆಗೆದು ತೆಗೆದು ಆಚೆಗೆ ಹಾಕುತ್ತಿದ್ದರು. ಅದೊಂದು ಅರ್ಥವಿಲ್ಲದ ಕೆಲಸವೇ ಆದರೂ ನೀವೂ ಅದನ್ನೇ ಆಯ್ಕೆ ಮಾಡಿಕೊಂಡಿರಿ. ಸಗಣೀಗೌಡರು, ಜಗನ್ನಾಥ, ರಂಗಪ್ಪರ ಜೊತೆ ಊರು ಬಿಟ್ಟು ಹೊರಡಲು ನೀವು ಬಯಸಲಿಲ್ಲ. ವ್ಯಕ್ತಿತ್ವ ವಿದಳನದ ಬದುಕು ನಿಮಗೆ ಸಾಕಾಗಿತ್ತು. ಅಂದರೆ ಗೋಪಾಲಯ್ಯ,